# ಗೇರು ಸಂಶೋಧನಾ ನಿರ್ದೇಶನಾಲಯ, ಪುತ್ತೂರು,

# ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ

ಗೇರು ಮತ್ತು ಕೊಕ್ಕೋ ಅಭಿವೃದ್ಧಿ ನಿರ್ದೇಶನಾಲಯ, ಕೊಚ್ಚಿನ್ ಪ್ರಾಯೋಜಕತ್ವದ ರಾಷ್ಟ್ರೀಯ ಗೇರು ಸಂಶೋಧನಾ ನಿರ್ದೇಶನಾಲಯದ ಯೋಜನೆ 'ಹೊಸ ಗೇರು ತಳಿಗಳ ಮುಂಚೂಣಿ ತಂತ್ರಜ್ಞಾನ ಪ್ರಾತ್ಯಕ್ಷಿಕೆ' ಅಡಿಯಲ್ಲಿ 2024-25 ನೇ ಸಾಲಿನ ಗೇರು ಕೃಷಿಗೆ ಆರ್ಥಿಕ ಸಹಾಯದ ವಿವರ.

**ವ್ಯಾಪ್ತಿ:** ದೇಶದ ವಿವಿಧ ಗೇರು ಬೆಳೆಯುವ ಪ್ರದೇಶಗಳು

**ದಯವಿಟ್ಟು ಗಮನಿಸಿ**: ೧) ಅರ್ಜಿ ಸಲ್ಲಿಸಬೇಕಾದ ಕೊನೆಯ ದಿನಾಂಕ: ಆಗಸ್ಟ್ 31, 2024
೨) ಮೊದಲು ಬಂದವರಿಗೆ ಆದ್ಯತೆ

## ಆರ್ಥಿಕ ಸಹಾಯಕ್ಕೆ ನಿಬಂಧನೆಗಳು:

1. ಮುಂಚೂಣಿ ತಂತ್ರಜ್ಞಾನ ಪ್ರಾತ್ಯಕ್ಷಿಕೆ (FLTD) ಯನ್ನು ಒಂದು ಎಕರೆ ಪ್ರದೇಶದಲ್ಲಿ 7 ಮೀ x 7 ಮೀ ಅಂತರದಲ್ಲಿ ಪ್ರತಿ ಎಕರೆಗೆ 80 ಗಿಡಗಳೊಂದಿಗೆ ಕೈಗೊಳ್ಳಬೇಕು.
2. ನೇತ್ರ ಗಂಗಾ, ನೇತ್ರ ಜಂಬೋ-1, ನೇತ್ರ ಜಂಬೋ-2, ನೇತ್ರ ಉಭಯ ಮತ್ತು ಭಾಸ್ಕರ ಎಂಬ ಐದು ತಳಿಗಳನ್ನು ನೆಡುವುದು ಕಡ್ಡಾಯವಾಗಿದೆ ಮತ್ತು ಈ ತಳಿಗಳ ಕಸಿಗಿಡಗಳನ್ನು ಗೇರು ಸಂಶೋಧನಾ ನಿರ್ದೇಶನಾಲಯ, ಪುತ್ತೂರು ಇಲ್ಲಿನ ನರ್ಸರಿಯಿಂದ ಪಡೆಯಬೇಕು.
3. ಪ್ರತಿಯೊಂದು ತಳಿಯ ಹದಿನಾರು ಕಸಿಗಿಡಗಳನ್ನು ನೆಡಬೇಕು (5 x 16=80).
4. ಒಂದು ಎಕರೆಗೆ ರೂ.8000 ಆರ್ಥಿಕ ನೆರವು ನೀಡಲಾಗುವುದು.
5. ಹಣಕಾಸಿನ ನೆರವು ನೆಟ್ಟ ಕಸಿಗಿಡಗಳ ಖರೀದಿ ವೆಚ್ಚ ಮತ್ತು ಪೋಷಕಾಂಶ ಮತ್ತು ಕೀಟ ನಿರ್ವಹಣೆಯ ವಸ್ತುಗಳ ವೆಚ್ಚಕ್ಕೆ ಸೀಮಿತವಾಗಿದೆ ಮತ್ತು 2024-25 ಹಣಕಾಸು ವರ್ಷಕ್ಕೆ ಮಾತ್ರ ಅನ್ವಯಿಸುತ್ತದೆ.
6. DCCD ಮೂಲಕ MIDH ಅಡಿಯಲ್ಲಿ ನೀಡಲಾದ ಯೋಜನೆಯ ಹೆಸರು ಮತ್ತು ಹಣಕಾಸಿನ ನೆರವನ್ನು ಬಿಂಬಿಸುವ ಕ್ಷೇತ್ರ ಫಲಕವನ್ನು ಹಾಕಬೇಕು.
7. ಕ್ಷೇತ್ರಭೇಟಿ ಹಾಗೂ ಪರಿಶೀಲನೆಯ ನಂತರ ಸಹಾಯಧನವನ್ನು ಬ್ಯಾಂಕ್ ಖಾತೆಗೆ ಹಾಕಲಾಗುವುದು.
8. ಹೆಚ್ಚಿನ ಮಾಹಿತಿಗೆ: 9916074454 or email: era.dasappa@gmail.com